O.S.No.:228/2018
P.W.:1

ಈ ದಿನ ದಿಃ26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಸಿಎಂಜೆ ರವರಿಂದಃ-**

1. ಈ ದಾವೆಯನ್ನು ಏನು ಪರಿಹಾರ ಕೋರಿ ಹೂಡಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಖಾತೆಯನ್ನು ಅವರು ಮಾಡಿಸಿಕೊಂಡಿರುತ್ತಾರೆ, ಹಾಗಾಗಿ ದಾವೆ ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತು. ಬಸವೇಗೌಡ ಮತ್ತು ಸಿದ್ದಬಸವೇಗೌಡ ರವರು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು 1967ರಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. 1967ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂಬ ಸಂಗತಿಯನ್ನು ನಾನು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ.

2. ಸರ್ವೆ ನಂ.1/2ರಲ್ಲಿ ನಿಮ್ಮ ತಂದೆಯ ಭಾಗಕ್ಕೆ 29ಗುಂಟೆ ಜಮೀನು ಬಂದಿತ್ತು ಎಂದು ತೋರಿಸಲು ನೀವು ವಿಭಾಗ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು, ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಭಾಗವು ಯಾರ ಯಾರ ನಡುವೆ ಆಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆ ಮತ್ತು ನನ್ನ

ಚಿಕ್ಕಪ್ಪನಾದ ಭೈರೇಗೌಡ ರವರ ನಡುವೆ ಆಗಿತ್ತು ಎಂದು ನುಡಿಯುತ್ತಾರೆ. ವಿಭಾಗ ಪತ್ರದ ಪ್ರಕಾರ ಯಾರು ಯಾರಿಗೆ ಯಾವ ಯಾವ ಜಮೀನುಗಳಲ್ಲಿ ಎಷ್ಟು ಎಷ್ಟು ವಿಸ್ತೀರ್ಣದ ಜಮೀನು ಅವರವರ ಭಾಗಕ್ಕೆ ಹೋಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.18ರಲ್ಲಿ ಒಟ್ಟು 3ಎಕರೆ 1 ಗುಂಟೆ ಜಮೀನು ಇದ್ದು, ಅದರ ಪೈಕಿ 1ಎಕರೆ 15 ಗುಂಟೆ ಜಮೀನು ಭೈರೇಗೌಡರ ಹಿಸ್ಸೆಗೆ ಹೋಗಿರುತ್ತದೆ, ಅದೇ ಪ್ರಕಾರ ಸರ್ವೆ ನಂ.18ರಲ್ಲಿ 1ಎಕರೆ 15 ಗುಂಟೆ ಜಮೀನು ಬಸವೇಗೌಡ ರವರ ಹಿಸ್ಸೆಗೆ ಹೋಗಿರುತ್ತದೆ ಮತ್ತು ಸರ್ವೆ ನಂ.26ರಲ್ಲಿ ಒಟ್ಟು 6ವರೆ ಎಕರೆ ಜಮೀನು ಇದ್ದು, ಅದರ ಪೈಕಿ 3 ಎಕರೆ ಜಮೀನು ಭೈರೇಗೌಡರ ಹಿಸ್ಸೆಗೆ ಮತ್ತು 3ವರೆ ಎಕರೆ ಜಮೀನು ಬಸವೇಗೌಡ ರವರ ಹಿಸ್ಸೆಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ.

3. ಸಿದ್ದೇಗೌಡ ರವರಿಗೆ 1952ರಲ್ಲಿ ಭೋಗ್ಯ ಆಗಿರುತ್ತದೆ. ಸದರಿ ಭೋಗ್ಯವನ್ನು ಅವರಿಗೆ ನನ್ನ ತಂದೆ ಮತ್ತು ಭೈರೇಗೌಡ ರವರು ಮಾಡಿಕೊಟ್ಟಿದ್ದರು. ಯಾವ ಯಾವ ಜಮೀನುಗಳನ್ನು ನಿಮ್ಮ ತಂದೆ ಮತ್ತುಭೈರೇಗೌಡ ರವರು ಸಿದ್ದೇಗೌಡ ರವರಿಗೆ ಭೋಗ್ಯಕ್ಕೆ ಕೊಟ್ಟಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.1/2ಎ ರಲ್ಲಿ 1ಎಕರೆ 8 ಗುಂಟೆ ಜಮೀನು, ಸರ್ವೆ ನಂ.40/2ರಲ್ಲಿ 1ಎಕರೆ 33 ಗುಂಟೆ ಜಮೀನು, ಸರ್ವೆ ನಂ.39/5ರಲ್ಲಿ 39ಗುಂಟೆ ಜಮೀನು ಮತ್ತು ಇನ್ನೊಂದು ಸರ್ವೆ ನಂಬರ್ ನಲ್ಲಿ 10 ಗುಂಟೆ ಜಮೀನನ್ನು ಅವರಿಗೆ ಭೋಗ್ಯ

ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ.

4. ಸರ್ವೆ ನಂ.1/2ರಲ್ಲಿ ಒಟ್ಟು ಒಂದು ಎಕರೆ ಜಮೀನು ಮಾತ್ರ ಇರುತ್ತದೆ ಎಂದರೆ ಸರಿ. ನಿಪಿ-2ರ ಪ್ರಕಾರ ಸರ್ವೆ ನಂ.1/2ರ ಪಹಣಿ ಪತ್ರಿಕೆಯಲ್ಲಿ ಸಿದ್ದಬಸವೇಗೌಡ ರವರ ಹೆಸರಿನ ಮುಂದೆ ಯಾವುದೇ ವಿಸ್ತೀರ್ಣ ವನ್ನು ತೋರಿಸಿಲ್ಲ ಮತ್ತು ಸಿಂಗ್ರೀಗೌಡ ರವರ ಹೆಸರಿನ ಮುಂದೆ 16 ಗುಂಟೆ ಜಮೀನು ಖಾತೆ ಇದೆ ಎಂದು ನಮೂದಿಸಿರುತ್ತದೆ ಎಂದರೆ ಸರಿ. ಸಿಂಗ್ರೀಗೌಡ ಬಿನ್ ತಿಮ್ಮೇಗೌಡ ರವರು ನಮ್ಮ ವಂಶಕ್ಕೆ ಸೇರಿದವರು ಅಲ್ಲ ಎಂದರೆ ಸರಿ. ಸಿದ್ದಬಸವೇಗೌಡ ರವರು ನನ್ನ ತಾತನವರು ಎಂದರೆ ಸರಿ.

5. ಸಿದ್ದೇಗೌಡ ರವರಿಗೆ ಭೋಗ್ಯ ಮಾಡುವ ಕಾಲಕ್ಕೆ ಸರ್ವೆ ನಂ.1/2ರಲ್ಲಿ 1ಎಕರೆ 8ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖಾತೆ ಪಹಣಿಗಳು ನಮ್ಮ ತಾತನವರ ಹೆಸರಿಗಾಗಲೀ, ನನ್ನ ತಂದೆ, ನನ್ನ ಚಿಕ್ಕಪ್ಪನವರ ಹೆಸರಿಗಾಗಲೀ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.1/2ರಲ್ಲಿ 1ಎಕರೆ 8 ಗುಂಟೆ ಜಮೀನಿನ ಖಾತೆ ಪಹಣಿಗಳು 1952ನೇ ಸಾಲಿನಿಂದಲ್ಲೂ ನನ್ನ ತಾತನ ಹೆಸರಿಗಾಗಲೀ ಅಥವಾ ನನ್ನ ತಂದೆಯ ಹೆಸರಿಗಾಗಲೀ ಯಾವತ್ತು ಇರಲೆ ಇಲ್ಲ ಎಂದರೆ ಸರಿಯಲ್ಲ. ಸಿದ್ದೇಗೌಡ ರವರಿಗೆ ಸರ್ವೆ ನಂ.1/2ರಲ್ಲಿ ಭೋಗ್ಯಕ್ಕೆ ಹಾಕಿದ್ದ 1ಎಕರೆ 8 ಗುಂಟೆ ಜಮೀನಿನ ಚಕ್ಕುಬಂದಿ ನಿಮಗೆ ಹೇಳಲು ಬರುತ್ತದೆಯಾ ಎಂದು ಕೇಳಿದ

ಪ್ರಶ್ನೆಗೆ ಸಾಕ್ಷಿಯು ಆ ಜಮೀನಿನ ಪೂರ್ವಕ್ಕೆ ಬಸವಯ್ಯ, ಮೂಗಿಸಿದ್ದಯ್ಯ ರವರ ಜಮೀನು, ಪಶ್ಚಿಮಕ್ಕೆ ರಾಂಪುರ ತಿಮ್ಮೇಗೌಡ ರವರ ಜಮೀನು, ಉತ್ತರಕ್ಕೆ ಸಿದ್ದಯ್ಯ, ಮೂಗಿಸಿದ್ದಯ್ಯ ರವರ ಜಮೀನು ಮತ್ತು ದಕ್ಷಿಣ ಸಿದ್ದಯ್ಯ, ಮೂಗಿಸಿದ್ದಯ್ಯ ಮತ್ತು ಬಸವಯ್ಯ ರವರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ.

6. ಈ ದಾವೆಯನ್ನು ಸರ್ವೆ ನಂ.1/2ಎ ಜಮೀನಿನಲ್ಲಿ ಇರುವಂತಹ 29ವರೆ ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ದಾವಾಸ್ವತ್ತಿ ಪೂರ್ವಕ್ಕೆ ಬಸವಯ್ಯ, ಮೂಗಿಸಿದ್ದಯ್ಯ ರವರ ಜಮೀನು, ಪಶ್ಚಿಮಕ್ಕೆ ರಾಂಪುರ ತಿಮ್ಮೇಗೌಡ ರವರ ಜಮೀನು, ಉತ್ತರಕ್ಕೆ ಸಿದ್ದಯ್ಯ, ಮೂಗಿಸಿದ್ದಯ್ಯ ರವರ ಜಮೀನು ಮತ್ತು ದಕ್ಷಿಣ ಸಿದ್ದಯ್ಯ ಮತ್ತು ಬಸವಯ್ಯ ರವರ ಜಮೀನು ಬರುತ್ತದೆ. ನಿಪಿ-3ರಲ್ಲಿ ನಮೂದಿಸಿದ ಬಸ್ವೇಗೌಡ ಬಿನ್ ಸಿದ್ದಬಸ್ವೇಗೌಡ ಎಂಬ ವ್ಯಕ್ತಿ ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ತಂದೆ ಎಂದು ನುಡಿಯುತ್ತಾರೆ. ನಿಪಿ-3ರ ಪ್ರಕಾರ ಬಸ್ವೇಗೌಡ ಬಿನ್ ಸಿದ್ದಬಸ್ವೇಗೌಡ ರವರ ಹೆಸರಿನ ಮುಂದೆ 180X43 ಕ್ರಯ ಎಂದು ನಮೂದಾಗಿರುತ್ತದೆ ಎಂದರೆ ಸರಿ.

7. ನನ್ನ ತಾಯಿಯ ಹೆಸರು ಮಾದಮ್ಮ, ಅವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ತಾಯಿಗೆ ಒಟ್ಟು 7ಜನ ಮಕ್ಕಳು ಎಂದರೆ ಸರಿ, ಅವರುಗಳೆಂದರೆ ನಾನು, ಬಸಮ್ಮ, ಭೈರೇಗೌಡ, ಸಿದ್ದೇಗೌಡ, ಮಲ್ಲಗಮ್ಮ,

ಗೌರಮ್ಮ ಮತ್ತು ಪುಟ್ಟಯ್ಯ ಎಂದರೆ ಸರಿ. ಈ ದಾವೆಯನ್ನು ದಾವಾಸ್ವತ್ತಿಗೆ ಸಂಬಂಧಿಸಿದಂತೆ ನನ್ನನ್ನು ಮಾಲೀಕನ್ನಾಗಿ ಘೋಷಿಸಲು ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಇತರೆ ಸಹೋದರ ಸಹೋದರಿಯನ್ನಾಗಲೀ ಅಥವಾ ಅವರ ವಾರಸುದಾರರನ್ನಾಗಲೀ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

8. ದಾವಾಸ್ವತ್ತು 1ನೇ ಪ್ರತಿವಾದಿಯ ಮಾವನವರಿಗೆ ಯಾವತ್ತು ಭೋಗ್ಯ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-9ರ ಪ್ರಕಾರ ದಾವಾಸರ್ವೆ ನಂಬರ್ ನಲ್ಲಿ ಒಟ್ಟು 30ವರೆ ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದರ ಪೈಕಿ 1ಗುಂಟೆ ಖರಾಬು ಹೋಗುತ್ತದೆ ಎಂದರೆ ಸರಿ. ಖರಾಬು ಕಳೆದು ಆ ಸರ್ವೆ ನಂಬರ್ ನಲ್ಲಿ ಒಟ್ಟು 29ವರೆ ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ 29ವರೆ ಗುಂಟೆ ಜಮೀನು ಪ್ರತಿವಾದಿಗಳ ಪಿತ್ರಾರ್ಜಿತವಾದ ಜಮೀನು ಎಂದರೆ ಸರಿಯಲ್ಲ. ದಾವಾಸ್ವತ್ತಿನ ಜಮೀನು 1ನೇ ಪ್ರತಿವಾದಿಯ ಮಾವನಾದ ಸಿದ್ದೇಗೌಡ ರವರ ಹೆಸರಿಗೆ ಆರ್.ಆರ್ 672ರ ಪ್ರಕಾರ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಸಿದ್ದೇಗೌಡರ ಪಿತ್ರಾರ್ಜಿತವಾದ ಜಮೀನು ಆದಕಾರಣಕ್ಕೆ ಸುಮಾರು 60-70ವರ್ಷಗಳಿಂದಲ್ಲೂ ಅವರ ಹೆಸರಿಗೆ ಆರ್.ಆರ್ ಮತ್ತು ಐ.ಎಲ್.ಆರ್ ಗಳಲ್ಲಿ ಖಾತೆ ಬರುತ್ತಿದೆ ಎಂದರೆ ಸರಿಯಲ್ಲ. ಸಿದ್ದೇಗೌಡರೆ ಅವರ ಜೀವಿತ ಕಾಲದವರೆಗೂ ದಾವಾಸ್ವತ್ತಿನಲ್ಲಿ ಸ್ವಾಧೀನಾನುಭವ ಹೊಂದಿದ್ದರು ಎಂದರೆ ಸರಿಯಲ್ಲ.

9. ಸಿದ್ದೇಗೌಡ ರವರ ಮರಣದ ನಂತರ ದಾವಾಸ್ವತ್ತಿನ ಖಾತೆಯು ಪೌತಿ ವಾರಸು ಆಧಾರದ ಮೇಲೆ ಆತನ ಮಗನಾದ ಜಿ.ವಿ ಸಿದ್ದೇಶ್ ರವರ ಹೆಸರಿಗೆ ಎಂ.ಆರ್ 22/2008-2009ರ ಪ್ರಕಾರ ಬದಲಾಗಿರುತ್ತದೆ ಎಂದರೆ ಸರಿಯಲ್ಲ. ಜಿ.ವಿ ಸಿದ್ದೇಶ್ ರವರ ಹೆಸರಿಗೆ ಖಾತೆ ಆದ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಜಿ.ವಿ ಸಿದ್ದೇಶ್ ರವರ ಹೆಸರಿಗೆ ಆದಂತಹ ಖಾತೆಯ ವಿರುದ್ದ ನಾನು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ ನಾವು ಯಾವತ್ತು ಸ್ವಾಧೀನದಲ್ಲಿ ಇಲ್ಲ, ದಾವಾಸ್ವತ್ತು ನಮಗೆ ಸಂಬಂಧಿಸಿದ್ದೆ ಅಲ್ಲ, ಹಾಗಾಗಿ ನಾವು ಖಾತೆಗೆ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

10. ಜಿ.ವಿ ಸಿದ್ದೇಶ್ ರವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಜಿ.ವಿ ಸಿದ್ದೇಶ್ ರವರ ಮರಣದ ನಂತರ ದಾವಾಸ್ವತ್ತಿನ ಖಾತೆಯು 1ನೇ ಪ್ರತಿವಾದಿಯ ಹೆಸರಿಗೆ ಬದಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ಕೇಸು ಚಾಲ್ತಿಯಲ್ಲಿರುವಾಗ ಅವರು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಹೆಸರಿಗೆ ಖಾತೆಯು 2013-2014ನೇ ಸಾಲಿನಲ್ಲಿ ಆಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ಹೆಸರಿಗೆ ಆದಂತಹ ಖಾತೆಯ

ವಿರುದ್ದವಾಗಲೀ ಜಿ.ವಿ ಸಿದ್ದೇಶ್ ರವರ ಹೆಸರಿಗೆ ಆದಂತಹ ಖಾತೆಯ ವಿರುದ್ದವಾಗಲೀ ನಾನು ಕಂದಾಯ ನ್ಯಾಯಾಲಯಗಳಲ್ಲಿ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ.

11. ನಿಪಿ-15 ರಿಂದ ನಿಪಿ-18ರಂತೆ ಇರುವ ದಾಖಲೆಗಳು ದಾವಾಸ್ವತ್ತಿಗೆ ಸಂಬಂಧಿಸಿದವುಗಳು ಅಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಈಗಲೂ ಸಹ ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಮತ್ತು ಅವರೆ ದಾವಾಸ್ವತ್ತಿನ ಹಕ್ಕುದಾರರು ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಮತ್ತು ಸ್ವಾಧೀನ ಇಲ್ಲದೆ ಇದ್ದರು ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**

O.S.No.:228/2018
P.W.:1